



# ಸಸಿ ನೆಟ್ಟ ಭಾವೀ ಪರಿಸರವಾದಿಗಳು



ಬೆಂಗಳೂರು

ಸೀತಾ ಕೃಷ್ಣರಾಜ್ ಅವರು ಸಹ ಸಂಸ್ಥಾಪಕರಾಗಿರುವ ಸ್ಟೆಪ್ಪಿಂಗ್ ಸ್ಟೋನ್ಸ್ ಇಂಟರ್ ನ್ಯಾಶನಲ್ ಶಿಶು ವಿಹಾರದ 3-4 ವರ್ಷ ವಯಸ್ಸಿನ 35 ಮಕ್ಕಳು ಮಕ್ಕಳ ದಿನಾಚರಣೆಯ ಅಂಗವಾಗಿ ಕರ್ನಾಟಕ ಅರಣ್ಯ ಇಲಾಖೆಯ ನಗರಾಭಿವೃದ್ಧಿ ವಿಭಾಗದೊಂದಿಗೆ ಕೈಗೂಡಿಸಿ ಮಡಿವಾಳ ಕೆರೆ ಕಚೇರಿಯ ಆವರಣದಲ್ಲಿ ಸಸಿ ನೆಟ್ಟರು.

ಸ್ಟೆಪ್ಪಿಂಗ್ ಸ್ಟೋನ್ ಇಂಟರ್ ನ್ಯಾಶನಲ್ ಎಳೆಯ ಮಕ್ಕಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸಲು ಈ ಉಪಕ್ರಮವನ್ನು ಕೈಗೊಂಡಿದೆ. ಈ ಸಸಿ ನೆಡುವ ಕಾರ್ಯಕ್ರಮದ ನಂತರ ಮಕ್ಕಳನ್ನು ಪ್ರಕೃತಿ ನಡಿಗೆಗೆ ಕರೆದೊಯ್ಯಲಾಗಿತ್ತು. ಇದರಲ್ಲಿ ಮಕ್ಕಳಿಗೆ ವಿವಿಧ ರೀತಿಯ ಮರಗಿಡಗಳ ಬಗ್ಗೆ ಶಿಕ್ಷಣ ನೀಡಲಾಯಿತು. ನಮ್ಮ ಸುತ್ತ ಮರಗಿಡಗಳನ್ನು ಹೊಂದಿರುವುದರ ಲಾಭವನ್ನು ಮಕ್ಕಳಿಗೆ ವಿವರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಸಹ ಸಂಸ್ಥಾಪಕರಾದ ಸೀತಾ ಕೃಷ್ಣರಾಜ್ ಅವರು ಮಾತನಾಡಿ, ಗಿಡ ಮರಗಳ ಸಂರಕ್ಷಣೆಯಿಂದ ಆಗುವ ಲಾಭ ಹಾಗೂ ಅದರ ಆರ್ಥಿಕ ಪರಿಣಾಮಗಳ ಬಗ್ಗೆ ಎಳೆಯ ಮಕ್ಕಳಲ್ಲಿ ಅರಿವು ಮೂಡಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಯಾರೂ ಈ ಕುರಿತು ಆಲೋಚಿಸದೇ ಇರುವುದು ದೊಡ್ಡ ತೊಂದರೆಯಾಗಿದೆ. ಸಮುದಾಯದಲ್ಲಿ ಮರಗಳ ಪಾತ್ರ ಕುರಿತು ಮಕ್ಕಳು ಮತ್ತು ಪೋಷಕರಲ್ಲಿ ಅರಿವು ಮೂಡಿಸುವುದು ನಮ್ಮ ಶಕ್ತಿಗಾದ ಪ್ರಯತ್ನವಾಗಿದೆ ಎಂದಿದ್ದಾರೆ.

ಈ ಸಂದರ್ಭದಲ್ಲಿ ಹಾಜರಿದ್ದ ಕ್ಷೇಮಾ ಟೆಕ್ನಾಲಜೀಸ್‌ನ ಅಧ್ಯಕ್ಷ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಅನಂತ್ ಕೊಪ್ಪರ್ ಅವರು ಮಾತನಾಡಿ, ನಗರದಲ್ಲಿ ಖಾಲಿ ಸ್ಥಳಗಳಲ್ಲಿ ರಸ್ತೆಗಳು, ಪಾದಚಾರಿ ರಸ್ತೆಗಳು ಬರುತ್ತಿವೆ. ಮರಗಳ ಸಂಖ್ಯೆ ಕಡಿಮೆಯಾಗುತ್ತದೆ. ಈ ರೀತಿಯ ಕಾರ್ಯಕ್ರಮಗಳಿಂದ ಪರಿಸರ ಪುನರುಜ್ಜೀವನಗೊಳಿಸಲು ಸಹಾಯವಾಗುತ್ತದೆ ಎಂದಿದ್ದಾರೆ.